ಬಾಗಿ ಒಂದೇ ಸಮನೆ ಸಲಾಮು ಹೊಡೆಯುತ್ತ, ಹಿಂದಕ್ಕೆ ಹೆಜ್ಜೆ ಹಾಕುತ್ತ, ಒಳಗೆ ಕರೆದೊಯ್ದ. ಅಲ್ಲಿ ಹಳೆಯ ಕಾಲದ ಒಂದು ಶಾಲನ್ನು ಒರಟಾದ ಒಂದು ಕಟ್ಟಿಗೆಯ ಕುರ್ಚಿಯ ಮೇಲೆ ಹೊದಿಸಲಾಗಿತ್ತು. ಆತ ಛೋಟಾ ಲಾರ್ಡ್ ಸಾಹೀಬರಿಗೆ ಅದರ ಮೇಲೆ ಕುಳಿತುಕೊಳ್ಳಲು ಹೇಳಿದ. ನಂತರ ಹಿಂದಿನ ಕಾಲದ ರಾಜ ದರ್ಬಾರುಗಳಲ್ಲಿ ಬಳಸುತ್ತಿದ್ದ ಉತ್ಕೃಷ್ಟ ಉರ್ದು ಭಾಷೆಯಲ್ಲಿ ಕೈಲಾಸ ಬಾಬು ಮಾತನಾಡಿದ. ಆ ಮೇಲೆ, ತನ್ನ ಐಶ್ವರ್ಯದ ಕೊನೆಯ ಕುರುಹಾಗಿದ್ದ ಒಂದು ಬಂಗಾರದ ತಟ್ಟೆಯಲ್ಲಿ ಸುಂಕೇಸರ ಹೂವಿನ ಮಾಲೆ ಇರಿಸಿ, ಅದನ್ನು ಆತನಿಗೆ ಕಾಣಿಕೆಯಾಗಿ ಅರ್ಪಿಸಿದ. ತನ್ನ ಕುಟುಂಬದ ಹಳೆಯ ಸೇವಕನಾಗಿದ್ದ ಗಣೇಶ, ಬೆಳ್ಳಿಯ ಕರಂಡಕದಿಂದ ಹೊರತೆಗೆದ ಗುಲಾಬಿ ಸುಗಂಧ ದ್ರವ್ಯದ ಹೂಜೆ ಹಿಡಿದುಕೊಂಡು, ಭಯ ವಿಹ್ವಲನಾಗಿ ಹಿಂಬದಿಯಲ್ಲಿ ನಿಂತಿದ್ದ. ಆಗಾಗ, ಲಾರ್ಡ್ ಸಾಹೀಬರಿಗೆ ನಾಜೂಕಾಗಿ ಸುಗಂಧ ದ್ರವ್ಯ ಸಿಂಪಡಿಸುತ್ತಿದ್ದ.

ಗೌರವಾನ್ವಿತ ಬಹಾದ್ದೂರ ಸಾಹೀಬರನ್ನು, ನಯಾಂಜೋರದ ವೈಭವಯುಕ್ತ ಶೈಲಿಯಲ್ಲಿ ಬರಮಾಡಿಕೊಳ್ಳಲು ಸಾಧ್ಯವಾಗದಕ್ಕೆ ಕೈಲಾಸ ಬಾಬು ಪದೇ ಪದೇ ವಿಷಾದ ವ್ಯಕ್ತಪಡಿಸುತ್ತಲಿದ್ದ. ನಯಾಂಜೋರದಲ್ಲಿದ್ದರೆ ಸಕಲ ರಾಜ ಮರ್ಯಾದೆಯೊಂದಿಗೆ ತಮ್ಮನ್ನು ಬರಮಾಡಿಕೊಳ್ಳಬಹುದಿತ್ತು. ಆದರೆ ಕಲ್ಕತ್ತೆಯಲ್ಲಿ, ಓರ್ವ ಅಪರಿಚಿತನಂತೆ, ಪರದೇಶಿಯಂತೆ, ನಿಜ ಹೇಳಬೇಕೆಂದರೆ, ಮೀನನ್ನು ನೀರಿನಿಂದ ಹೊರತಗೆದಂತೆ ಬಾಳಬೇಕಾದ ಸ್ಥಿತಿ ಅವನದಾಗಿತ್ತು.

ಎತ್ತರದ ರೇಶಿಮೆ ಹ್ಯಾಟ್ ಧರಿಸಿದ್ದ ನನ್ನ ಗೆಳೆಯ ಅವನ ಮಾತಿಗೆ ತುಂಬಾ ಗಾಂಭೀರ್ಯವಾಗಿ ಗೋಣು ಹಾಕುತ್ತಲಿದ್ದ. ಇಂಗ್ಲಿಷ್ ಪದ್ಧತಿಯಂತೆ, ಕೋಣೆಯೊಳಗೆ ಬಂದಾಗ ತಲೆಯ ಮೇಲಿನ ಹ್ಯಾಟ್ ತೆಗೆಯಬೇಕೆಂಬುದನ್ನು ನಾನು ಒತ್ತಿ ಹೇಳಬೇಕಿರಲಿಲ್ಲ. ಆದರೆ ಎಲ್ಲಿಯಾದರೂ ತನ್ನ ಗುರುತು ಸಿಕ್ಕೀತೆಂಬ ಭಯದಿಂದ ಆತ ಹ್ಯಾಟ್ ತೆಗೆದಿರಲಿಲ್ಲ. ಕೈಲಾಸ ಬಾಬು ಹಾಗೂ ಆತನ ಹಳೆಯ ಸ್ನೇಹಿತ ಗಣೇಶ ಮಂತ್ರಮುಗ್ಧರಾಗಿ, ಮೈಮರೆತು ಕುಳಿತಿದ್ದರಿಂದ ಆ ಶಿಷ್ಟಾಚಾರದ ಕಡೆ ಅವರು ಗಮನ ಹರಿಸಿರಲಿಲ್ಲ.

ಹತ್ತು ನಿಮಿಷಗಳವರೆಗೆ ಬರೀ ಗೋಣು ಹಾಕುತ್ತ, ತನ್ನ ಸಂದರ್ಶನ ಮುಗಿಸಿದ ನಂತರ ನನ್ನ ಗೆಳೆಯ ಹೊರಡಲನುವಾದ. ಮೊದಲೇ ಉಪಾಯ ಹೂಡಿದಂತೆ, ಅಲ್ಲಿದ್ದ ನಮ್ಮ ವೇಷಧಾರಿ ರಾಜಸೇವಕರು, ಸುಂಕೇಸರ ಮಾಲೆಯನ್ನು, ಬಂಗಾರದ ತಟ್ಟೆಯನ್ನು, ಹಳೆಯ ಶಾಲನ್ನು, ಸುಗಂಧದ್ರವ್ಯ ಸಿಂಪಡಿಸುವ ಬೆಳ್ಳಿಯ ಹೂಜೆಯನ್ನು, ಬೆಳ್ಳಿಯ ಕರಂಡಕವನ್ನು, ಗೌರವ ಪೂರ್ವಕವಾಗಿ ಎತ್ತಿಕೊಂಡು ಬಂದು ಅವುಗಳನ್ನು ಸಾರೋಟಿನಲ್ಲಿರಿಸಿದರು. ಅವುಗಳನ್ನು ತೆಗೆದುಕೊಂಡು ಹೋಗುವುದು ಛೋಟಾ ಲಾರ್ಡ್ ಸಾಹೀಬರ ಸಹಜ ಪದ್ಧತಿಯಾಗಿರಬಹುದೆಂದು ಕೈಲಾಸ ಬಾಬು ಅಂದುಕೊಂಡನು.

ಬದಿಯ ಕೋಣೆಯಲ್ಲಿದ್ದುಕೊಂಡು ನಾನು ಎಲ್ಲವನ್ನೂ ಗಮನಿಸುತ್ತಿದ್ದೆ. ನಗೆಯನ್ನು ಹತ್ತಿಕ್ಕಿಕೊಂಡು ನನ್ನ ಪಕ್ಕೆಲುಬುಗಳು ನೋಯುತ್ತಿದ್ದವು. ಬಹಳ ಹೊತ್ತು ನಗೆ ತಡೆದುಕೊಳ್ಳಲು ಸಾಧ್ಯವಾಗದೆ ನಾನು ಮುಂದಿನ ಕೋಣೆಗೆ ಧಾವಿಸಿ, ಗಹಗಹಿಸಿ ನಗತೊಡಗಿದೆ. ಏಕಾಏಕಿ ಅಲ್ಲಿ ಕಂಡದ್ದೇನು! ಆ ಕೋಣೆಯ ಒಂದು ಮೂಲೆಯಲ್ಲಿ ಕುಳಿತು ಓರ್ವ ಹದಿಹರೆಯದ ತರುಣಿ ಹೃದಯ ಒಡೆದು ಹೋಗುವ ಹಾಗೆ ಬಿಕ್ಕುತ್ತ ಕುಳಿತಿದ್ದಳು. ನಾನು ಗಹಗಹಿಸಿ ನಗುವುದನ್ನು ಕಂಡು ಅವಳು, ತನ್ನ ಅಗಲವಾದ ಕಣ್ಣುಗಳ ಮಿಂಚನ್ನು ನನ್ನ ಕಣ್ಣುಗಳಿಗೆ ಹರಿಸಿ, ಭಾವುಕಳಾಗಿ ಎದ್ದು ನಿಂತು, ಕಣ್ಣೀರು ತುಂಬಿಕೊಂಡು ಬಿಗಿದ ಕಂಠದ ದನಿಯಲ್ಲಿ ಹೇಳಿದಳು.

''ಹೇಳಿ, ನನ್ನ ತಾತ ನಿಮಗೇನು ಕೆಡಕು ಮಾಡಿದ್ದರು? ಅವರನ್ನು ಮೋಸಮಾಡಲು ಏಕೆ ಬಂದಿರಿ? ಏಕೆ?'' ಆಕೆಗೆ ಮುಂದೆ ಮಾತನಾಡಲು ಆಗಲಿಲ್ಲ. ತನ್ನ ಕೈಗಳಿಂದ ಮುಖವನ್ನು ಮುಚ್ಚಿಕೊಂಡು ಒಂದೇ ಸಮನೆ ಬಿಕ್ಕತೊಡಗಿದಳು.